(SRI G. SIVAPPA.)

(*b*) whether it has come to their notice that there is a heavy demand for power for irrigation purpose in this area;

(*c*) how far the work has progressed in this area;

(*d*) whether they are aware that some iron poles are dumped on the line one and a half years ago and are got rusted;

(*e*) the reason for so much of delay;

(*f*) whether they will take up the work immediately?

A.—**Sri T. SIDDALINGAIYA** (Minister for Industries).—

(*a*) 1949.

(*b*) Yes.

(*c*) The electric lines have been extended from Chitaldrug *via* Sivaganga village up to Holalkere and the work of extending the line further from Holalkere to Hosadurga will be taken up shortly depending upon the availability of materials.

(*d*) Yes.

(*e*) The reasons for the delay are due to shortage of line materials mainly copper wire in the market and generally long delivery periods by all firms executing the orders. In spite of these difficulties this work of electrification is in progress.

(*f*) Yes.

ಶ್ರೀ ಜಿ. ಶಿವಪ್ಪನವರು.—(d) ಪ್ರಶ್ನೆಗೆ ಉತ್ತರವಾಗಿ ಕಬ್ಬಿಣದ ಕಂಬಗಳು ತುಕ್ಕು ಹಿಡಿದಿವೆಯೆಂದು ಹೇಳಿದ್ದೀರಿ. ಅದರಿಂದ ನಷ್ಟವೆಷ್ಟು?

ಶ್ರೀ ಟಿ. ಸಿದ್ದಲಿಂಗಯ್ಯನವರು.—ತುಕ್ಕು ಹಿಡಿಯುವುದು ಕಬ್ಬಿಣದ ಸ್ವಭಾವ, ಆದ್ದರಿಂದ ಅದು ಎಲ್ಲಿದ್ದರೂ ನಷ್ಟವಾಗುವುದು ಆಗಿಯೇ ಆಗುತ್ತದೆ.

ಶ್ರೀ ಜಿ. ಶಿವಪ್ಪನವರು.—ನಷ್ಟವನ್ನು ಎಸ್ಟಿಮೇಟ್ ಮಾಡುವುದಕ್ಕೆ ಸಾಧ್ಯವಾಗಿದೆಯಲ್ಲವೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದು ನಷ್ಟವಾಗದ ಹಾಗೆ ನಾವು ನೋಡಿಕೊಳ್ಳಬೇಕಾಗುತ್ತದೆ. ಅದನ್ನು ತಪ್ಪಿಸುವುದಕ್ಕಾಗುವುದಿಲ್ಲ.

ಶ್ರೀ ಜಿ. ಶಿವಪ್ಪನವರು.—ತಾವು ನಿಧಾನವಾಗಿರುವುದಕ್ಕೆ ನಲಕರಣಗಳು ಇಲ್ಲದಿರುವುದು ಕಾರಣವಾಗಿದೆಯೆಂದು ಹೇಳಿದ್ದೀರಿ. ನಾನು ಹೇಳುವುದು ಹಾಗಲ್ಲ.....

ಅಧ್ಯಕ್ಷರು.—ಪ್ರಶ್ನೆಯೇನಾದರೂ ಇದ್ದರೆ ಕೇಳಿ.

Sri G. SIVAPPA.—I have another supplementary Sir.

Mr. SPEAKER.—But I find you are making a statement.

ಶ್ರೀ ಜಿ. ಶಿವಪ್ಪನವರು.—ಮೊಳಕಾಲ್ಮೂರು, ಚಳ್ಳಕೆರೆಯಲ್ಲರುವ ಆವಶ್ಯಕತೆ ಹೊಳಲ್ಕೆರೆಯಲ್ಲೂ ಇದೆಯೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಎಲ್ಲೆಲ್ಲೂ ಅದೇ ರೀತಿ ಇದೆಯೆಂಬುದು ಗೊತ್ತಿದೆ.

ಶ್ರೀ ಜಿ. ಶಿವಪ್ಪನವರು.—ಒಂದು ವರ್ಷದ ಹಿಂದೆ ಕೆಲಸ ಮಾಡುತ್ತಿದ್ದುದನ್ನು ಈಗ ಏಕಾ ಏಕಿ ನಿಲ್ಲಿಸುವುದಕ್ಕೆ ಕಾರಣವೇನು?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಗೊತ್ತಿಲ್ಲ.

Sri. Mulka GOVINDA REDDY (Chitaldurg).—May I know from where you are importing iron materials and from what firms?

Sri T. SIDDALINGAIYA.—Notice.

ಶ್ರೀ ಜಿ. ಬಸಪ್ಪನವರು (ಹೊಸದುರ್ಗ).—(d) ಪ್ರಶ್ನೆಗೆ ಉತ್ತರವಾಗಿ ಹೊಸದುರ್ಗಕ್ಕೆ ಬಡಾವಣೆಗೊಳಿಸಲಾಗುತ್ತದೆ ಎಂದು ಹೇಳಿದೆ. ಹಾಗಾದರೆ ಹೊಳಲ್ಕೆರೆಯಿಂದ ಬಡಾವಣೆ ಮಾಡಲಾಗುವುದೆ?

Mr. SPEAKER.—It was answered fully yesterday.

Honnemaradu Project.

Q.—204. **Sri S. GOPALA GOWDA** (Sagar-Hosanagar).—

Will the Government be pleased to state:—

(*a*) the probable minimum time after which the Honnemaradu project will be taken up;

(*b*) the period required for the completion of the project; and

(*c*) the minimum period which will be allowed to the people to evacuate the acquirable lands?

A.—**Sri T. SIDDALINGAIYA** (Minister for Industries).—

(*a*) It cannot be forecast, as the project is yet to be sanctioned.

(*b*) The first stage of the project is expected to be completed within eight years from the date of starting it.

(*c*) One or two years from the date of starting the Project.

ಶ್ರೀ ಎಸ್. ಗೋಪಾಲಗೌಡರು.—ಹೊನ್ನೆಮರಡು ಯೋಜನೆಗೆ ಯಾರು ಸಲಹೆ ನೀಡಿದರು?

Sri T. SIDDALINGAIYA.—The Department.

ಶ್ರೀ ಎಸ್. ಗೋಪಾಲಗೌಡರು.—ಹಿರೇಭಾಸ್ಕರ್ ಯೋಜನೆ ಕಾಲದಲ್ಲಿ ಹೊನ್ನೆಮರಡು ಯೋಜನೆ ಸರ್ಕಾರದ ದೃಷ್ಟಿಯಲ್ಲಿತ್ತೆ?

Sri T. SIDDALINGAIYA.—It is unfortunate. It seems, it was not.

ಶ್ರೀ ಎಸ್. ಗೋಪಾಲಗೌಡರು.—ಈಗ ಹೊನ್ನೆಮರಡು ಯೋಜನೆ ನಿಂತಿರುವುದರಿಂದ ಹಿರೇಭಾಸ್ಕರ್ ಅಣೆಕಟ್ಟು ಪೂರ್ತಿಯಾಗುತ್ತಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

Sri T. SIDDALINGAIYA.—It is obvious.

ಶ್ರೀ ಎಸ್. ಗೋಪಾಲಗೌಡರು.—ಹೊನ್ನೆಮರಡು ಅಣೆಕಟ್ಟು ಕಟ್ಟಿರುವುದು ಬರೀ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವುದಕ್ಕೆ ಮಾತ್ರ ಅಲ್ಲವೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈಗಿರುವ ಉದ್ದೇಶ ಅದು.

ಶ್ರೀ ಎಸ್. ಗೋಪಾಲಗೌಡರು.—ಅನಂತರದಲ್ಲಿ ನೀರಾವರಿ ಕಾಮಗಾರಿಗಳಿಗೆ ನೀರನ್ನೊದಗಿಸಲು ಸಾಧ್ಯವೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈಗಲೇ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡರು.—ಈ ಯೋಜನೆಗೆ ಎಷ್ಟು ಕೋಟಿ ರೂಪಾಯಿಗಳಾಗುತ್ತವೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸುಮಾರು 25 ಕೋಟಿ ರೂಪಾಯಿಗಳೆಂದು ಈಗ ಅಂದಾಜಾಗಿದೆ ; 35 ಕೋಟಿಯವರೆಗೂ ಹೋಗಬಹುದು.

ಶ್ರೀ ಎಸ್. ಗೋಪಾಲಗೌಡರು.—ಈಗ ಅಲ್ಲಿ ಸರ್ವೆ ನಡೆದಿದೆಯಲ್ಲವೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹೌದು.

ಶ್ರೀ ಎಸ್. ಗೋಪಾಲಗೌಡರು.—ಎಷ್ಟು ಕಾಲದಲ್ಲಿ ಮುಗಿಯಬಹುದು ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈ ವರ್ಷದೊಳಗೆ ಮುಗಿಯುತ್ತದೆ. ನಮಗೆ ಹಣ ದೊರಕಿದ್ದರೆ ಇನ್ನೂ ಜಾಗ್ರತೆ ಮಾಡುತ್ತಿದ್ದೆವು.

ಶ್ರೀ ಎಸ್. ಗೋಪಾಲಗೌಡರು.—ಸರ್ವೆ ಮುಗಿದ ನಂತರ ಕೆಲಸವಾಗುತ್ತದೆಯೆಂದು ಭಾವಿಸಬಹುದೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸಂದೇಹವಿಲ್ಲ.

ಶ್ರೀ ಎಸ್. ಗೋಪಾಲಗೌಡರು.—ಈ ಅಣೆಕಟ್ಟಿನ ಸಂಬಂಧದಲ್ಲಿ ಶಿವಮೊಗ್ಗದ ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು ಮುಂತಾದ ಕೆಲವು ಪ್ರಮುಖರು ಕೊಟ್ಟ ಸಲಹೆಯನ್ನು ಸರ್ಕಾರ ಗಮನಿಸಿದೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಗಮನಿಸಿದೆ.

ಶ್ರೀ ಎಸ್. ಗೋಪಾಲಗೌಡರು.—ಆ ಬಗ್ಗೆ ಸರ್ಕಾರದ ಅಭಿಪ್ರಾಯವೇನು ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇನ್ನೂ ಯೋಚನೆ ಮಾಡಿಲ್ಲ.

ಶ್ರೀ ಎಸ್. ಗೋಪಾಲಗೌಡರು.—ಈ ಸಂದರ್ಭದಲ್ಲಿ ಸರ್ಕಾರದಲ್ಲಿ ಹಣವಿಲ್ಲದಿರುವುದರಿಂದ ಮತ್ತು ಸದ್ಯಕ್ಕೆ ಹಿರೇಭಾಸ್ಕರ್ ಅಣೆಕಟ್ಟಿನಿಂದ ಸಾಕಷ್ಟು ನೀರು ಒದಗುತ್ತಿರುವುದರಿಂದ ಈ ಅಣೆಕಟ್ಟಿನ ಯೋಜನೆ ಮುಂದುವರಿಯಲಲ್ಲ ಅಲ್ಲವೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹಣ ಒದಗದೇ ಇರುವುದರಿಂದ ಮುಂದಕ್ಕೆ ಹೋಗುತ್ತಿದೆ. ಇದರಲ್ಲಿ ಏನೂ ಸಂದೇಹವೇ ಇಲ್ಲ.

ಶ್ರೀ ಎಸ್. ಗೋಪಾಲಗೌಡರು.—ಈ ಸಂಬಂಧದಲ್ಲಿ ಕೇಂದ್ರ ಸರ್ಕಾರದೊಡನೆ ಏನಾದರೂ ಮಾತುಕತೆ ನಡೆದಿದೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಖಚಿತವಾಗಿ ಏನೂ ಹೇಳುವುದಕ್ಕಾಗುವುದಿಲ್ಲ. ಅಂತೂ ಮಾತುಕತೆ ನಡೆಯುತ್ತಿದೆ.

ಶ್ರೀ ಎಸ್. ಗೋಪಾಲಗೌಡರು.—ಈ ಯೋಜನೆಯನ್ನು ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲು ಕೇಂದ್ರ ಸರ್ಕಾರ ಒಪ್ಪಿಗೆ ಕೊಟ್ಟಿದೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇಲ್ಲ.

ಶ್ರೀ ಎಸ್. ಗೋಪಾಲಗೌಡರು.—ಮುಂದಾದರೂ ಸರ್ಕಾರ ಇದಕ್ಕೆ ಪ್ರಯತ್ನಮಾಡುತ್ತದೆಯೆ ?

9 A.M.

Sri T. SIDDALINGAIYA.—We shall do our best. We are doing our best even now.

ಶ್ರೀ ಎಚ್. ಎಸ್. ರುದ್ರಪ್ಪನವರು (ಹೊನ್ನಾಳಿ).—ಅದಕ್ಕೆ ಇನ್ನಾವುದಾದರೂ ಆಲ್ಟರ್‌ನೇಟ್ ಪ್ರಪೋಸಲ್ ಇದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋ ಚೇಂಜ್.

ಶ್ರೀ ಎಚ್. ಎಸ್. ರುದ್ರಪ್ಪನವರು.—ತಾವು ಈ ಜಮೀನು ಮುಳುಗಡೆ ಆಗತಕ್ಕವರಿಗೆ ಒಂದು ಅಥವಾ ಎರಡು ವರ್ಷಗಳ ಕಾಲಾವಕಾಶ ಕೊಡುತ್ತೇವೆಯೆಂದು ಹೇಳಿದ್ದೀರಿ ಆ ರೀತಿ ಎಷ್ಟು ಜನರ ಜಮೀನು ಮುಳುಗಡೆಯಾಗುತ್ತದೆಯೆಂಬ ಲೆಕ್ಕವಿದೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹೇಳುವುದಕ್ಕಾಗುವುದಿಲ್ಲ.

Supply of Electricity to Vedavathi Basin.

Q.—233. Sri V. MASIYAPPA (Hiriyur).—

Will the Government be pleased to state :—

(*a*) whether the estimate for supplying electricity to the Vedavati basin has been sanctioned ; if so, when ; and why it has not been given effect to ;

(*b*) whether the raiyats under Vanivilas Sagar atchkat have not given mutchalikas binding themselves to take power ?

A.—Sri T. SIDDALINGAIYA (Minister for Industries).—

(*a*) Five Major estimates amounting to Rs. 31,78,000 were prepared for power supply to 729 Irrigation Pumping sets in Vedavati Basin in Chitaldrug. Of these one of the estimates for Rs. 13 lakhs for power supply to 298 Irrigation Pumping Sets was sanctioned by Government on 19th April 1951. The work is in progress and more than 50 per cent of the work has been completed already.

(*b*) Yes.